**ಸಾಕ್ಷಿಯನ್ನು ದಿನಾಂಕ 15-07-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎ.ಎನ್.ಎಲ್ ವಕೀಲರಿಂದಃ**

9. ನಾನು ಕೆಲಸ ಮಾಡುವ ಕಂಪನಿಯ ವ್ಯವಸ್ಥಾಪಕರು ನನ್ನ ಮನೆಯಲ್ಲೇ ಬಾಡಿಗೆಗೆ ಇದ್ದಾರೆ ಎಂದರೆ ಸರಿಯಲ್ಲ. ವಾದ ಪತ್ರದ ಪ್ರಕಾರ ಪ್ರತಿವಾದಿ ಶೇ.18 ರಷ್ಟು ಬಡ್ಡಿ ಕೊಡಲು ಒಪ್ಪಿದ್ದರು ಎಂದು ಬರೆಯಲಾಗಿದೆ ಎಂದರೆ ಸರಿ. ಆದರೆ ನಿ.ಪಿ.–1 ರ ದಾಖಲೆಯಲ್ಲಿ ಮಾಹೆಯಾನ ರೂ.1.50 ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿ ಪುನಃ ಸದರಿ ಮೊತ್ತವನ್ನು ವರ್ಷಕ್ಕೆ ಲೆಕ್ಕ ಶೇ.18 ರಷ್ಟು ಆಗುತ್ತದೆ ಎನ್ನುತ್ತಾರೆ. ನಿ.ಪಿ.–1 ಮತ್ತು 2 ರ ದಾಖಲೆಗೆ ಸಹಿ ಮಾಡಿರುವ ಸಾಕ್ಷಿದಾರರು ಇಬ್ಬರು ಭದ್ರಾವತಿಯ ವಾಸಿ ಎಂದರೆ ಸರಿ. ಸದರಿಯವರಿಬ್ಬರು ನನ್ನ ಸಹಪಾಠಿಗಳು ಎಂದರೆ ಸರಿಯಲ್ಲ. ಅವರಿಬ್ಬರು ನಮ್ಮ ಮನೆ ಇರುವ ಪ್ರದೇಶದಲ್ಲೇ ವಾಸವಿದ್ದಾರೆ ಎಂದರೆ ಸರಿಯಲ್ಲ. ನಾನು ಕೆಲಸ ಮಾಡುವ ಕಂಪನಿಯ ವ್ಯವಸ್ಥಾಪಕರು ಮತ್ತು ಸ್ನೇಹಿತರೊಂದಿಗೆ ಸೇರಿಕೊಂಡು ನಿ.ಪಿ.–1 ಮತ್ತು 2 ರ ದಾಖಲೆಗಳನ್ನು ಸೃಷ್ಟಿಮಾಡಿ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ.**